# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**Misc No. 06/2015**

**RW: 1**

**ದಿನಾಂಕ 28-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರವಾಗಿ ಶ್ರೀ. ಆರ್.ಎಮ್.ಕೆ. ರವರಿಂದಃ**

ನನ್ನ ಯಜನಮಾನ ಅಟೋಮೋಬೈಲ ಬ್ಯುಜೀನೆಸ್ ಮಾಡುತ್ತಾರೆ ಎಂದರೆ ಸರಿ. ಅದರಿಂದ ಅವರಿಗೆ ಸಾಕಷ್ಟು ಉತ್ಪನ್ನ ಮತ್ತು ಉಳಿತಾಯ ಇತ್ತು ಎಂದರೆ ಸರಿ. 1983 ನೇ ಇಸವಿಯಲ್ಲಿ ಸರ್ವೆ ನಂ. 134 ಕ್ಷೇತ್ರ 12 ಎಕರೆ ಖರೀದಿ ಮಾಡಿದ್ದರು ಎಂದರೆ ಸರಿ. ಅದು ಅವರ ಸ್ವಂತ ಆಸ್ತಿ ಎಂದರೆ ಸರಿ. ಅಸಲು ದಾವೆ 194/1994 ರ ದಾವೆ ರಾಜಿಯಾಗಿದ್ದು ಸದರಿ ರಾಜಿಯಲ್ಲಿ ಸರ್ವೆ ನಂ. 134 ಕ್ಷೇತ್ರ 12 ಎಕರೆ ನನ್ನ ಗಂಡನ ಸ್ವಂತ ಆಸ್ತಿ ಆಗಿದ್ದರಿಂದ ಸದರಿ ಆಸ್ತಿಯನ್ನು ನನ್ನ ಗಂಡನಿಗೆ ಇಟ್ಟಿದ್ದರು ಎಂದರೆ ಸರಿ. 528 ಬಿ ದಕ್ಷಿಣ ಭಾಗದ ಮನೆಯನ್ನು ಸಹ ನನ್ನ ಗಂಡನಿಗೆ ಇಟ್ಟಿದ್ದರು ಎಂದರೆ ಸರಿ. ಸದರಿ ರಾಜಿ ಆದೇಶದ ಪ್ರಕಾರ ಜಮೀನು ಸರ್ವೆ ನಂ. 134 ಕ್ಷೇತ್ರ 12 ಎಕರೆ ಮತ್ತು 528 ಬಿ ದಕ್ಷಿಣ ಭಾಗದ ಮನೆ ನನ್ನ ಗಂಡನ ಕಬ್ಜೆ ವಹಿವಾಟಿಯಲ್ಲಿ ಮಾಲ್ಕಿನಾತೆಯಿಂದ ಇರುತ್ತವೆ ಎಂದರೆ ಸರಿ. ಎದುರುದಾರ 6 ಮತ್ತು 7 ಇವರಿಗೆ ಸದರಿ ರಾಜಿಯಾಗಿ ಯಾವುದೇ ಆಸ್ತಿ ನೀಡಿರಲಿಲ್ಲ ಎಂದರೆ ಸರಿ. ನನ್ನ ಹೆಸರಿಗೆ ದಾಖಲೆಗಳನ್ನು ನನ್ನ ಮಾವನಾದ ಚಂದು ತಯಾರಿಸಿದ್ದರು ಎಂದರೆ ಸರಿ. ಚಂದುವ ಮತ್ತು ನಾನು ಸೇರಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಜೆ.ಎಂ.ಎಫ್.ಸಿ. ನ್ಯಾಯಾಲಯ
ಇಂಡಿ.